ಶ್ರೀ ಆರ್. ರಾಜೇಗೌಡ.—(೫) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಹುಕುಂ ಪ್ರಕಾರ ಹಿಡುವಳಿ ಜಮೀನು ಎಷ್ಟು ?

† ಶ್ರೀ ಎನ್. ಹುಚ್ಚಮಾಸಿಗೌಡ.—ಸರ್ಕಾರದ ಹುಕುಂ ಪ್ರಕಾರ ೧೦ ಎಕರೆ ಖುಷ್ಕಿ, ೨ ಎಕರೆ ಹೆಚ್ಚು ನೀರು ಬರತಕ್ಕ ತರೀ, ಮತ್ತು ಸಾಮಾನ್ಯವಾಗಿ ನೀರು ಒದಗಿಸುವಂಥ ೪ ಎಕರೆ. ಆದರೆ ಇದಕ್ಕಿಂತ ಹೆಚ್ಚಿಗೆ ಭೂಮಿ ಇದ್ದರೆ, ಅದನ್ನು ಬಿಡುಗಡೆ ಮಾಡಿಸಬೇಕೆಂದು ಸರ್ಕಾರದ ಆಜ್ಞೆ ಇದೆ.

ಶ್ರೀ ಆರ್. ರಾಜೇಗೌಡ.—ಹಿಡುವಳಿಯ ಜಮೀನಿನಿಂತ ಅಂದರೆ ೧೦ ಎಕರೆಗಳಿಗಿಂತ ಚಾಸ್ತಿ ಅಕ್ರಮಿಸಿಕೊಂಡಿರುವವರು ಇದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರಣೆ ನನ್ನಲ್ಲಿಲ್ಲ. ೧೦ ಎಕರೆಗಿಂತ ಹಿಡುವಳಿ ಹೆಚ್ಚಾಗಿ ಇರುವುದೆಲ್ಲಾ ಮೊಟ್ಟಮೊದಲು ಇತ್ತು. ೧೯೫೯ನೇ ಏಪ್ರಿಲ್ ೧ನೇ ತಾರೀಖಿನವರೆಗೆ ೨೫೦೦ ಜನರು ೫೦೦೯ ಎಕರೆಗಳಷ್ಟು ಅಕ್ರಮಿಸಿಕೊಂಡಿದ್ದರು. ೧ನೇ ಏಪ್ರಿಲ್ ೧೯೫೯ರಿಂದ ೧ನೇ ಜುಲೈ ೧೯೬೨ರವರೆಗೆ ೧೬೭೭ ಜನರು ೩೧೪೯ ಎಕರೆಗಳನ್ನು ಅಕ್ರಮಿಸಿಕೊಂಡಿದ್ದರು. ೧ನೇ ಜುಲೈ ೧೯೬೨ರ ಮೇಲೆ ೯೧೯ ಜನಗಳು ೧೮೭೦ ಎಕರೆ ೧೭ ಸೆಂಟ್ಸ್ ಜಮೀನನ್ನು ಅಕ್ರಮಿಸಿಕೊಂಡಿದ್ದರು.

ಶ್ರೀ ಆರ್. ರಾಜೇಗೌಡ.—ಮಾನ್ಯ ಮಂತ್ರಿಗಳು ವಿವರವಾಗಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಹರಿಜನರು ಮತ್ತು ಗಿರಿಜನರು ಎಷ್ಟು ಜನರು ಈ ಜಮೀನುಗಳನ್ನು ಅಕ್ರಮಿಸಿಕೊಂಡಿದ್ದಾರೆ. ಅವರಿಗೆ ಸರ್ಕಾರ ಏನು ಪರ್ಸಂಟೇಜ್ ಕೊಡಬೇಕೆಂದು ನಿಗದಿಮಾಡಿದೆಯೋ ಅದರಂತೆ ತೀರ್ಮಾನಮಾಡಿ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸಿಗೌಡ.—ಆ ವಿವರಣೆಯನ್ನು ಇನ್ನೂ ಸಂಗ್ರಹಿಸಿಲ್ಲ.

FACILITIES AVAILABLE FOR STARTING INDUSTRIES IN THIRTHAHALLY AREA

515. SRI KONANDUR LINGAPPA (Thirthahalli):—Will the Minister for Industries be pleased to state.—

whether it has come to the notice of Government that various facilities are available in Thirthahally area for starting industries ?

SRI S. M. KRISHNA (Minister for Industries).—Yes. There is scope for starting wood-based industries, bamboo-based industries, cane furniture industries and Ceramic production.

ಶ್ರೀ ಕೋಣಂದೂರು ಲಿಂಗಪ್ಪ.—ತೀರ್ಥಹಳ್ಳಿ ಕ್ಷೇತ್ರದಲ್ಲಿ ಅಲ್ಲಿಗೆ ಸಂಬಂಧಪಟ್ಟ ಹಾಗೆ ಒಂದು ಕಾರ್ಖಾನೆಯನ್ನು ಆರಂಭಿಸುವುದಾದರೆ, ಸರ್ಕಾರದಿಂದ ಏನೇನು ಸವಲತ್ತುಗಳನ್ನು ಕೊಡುತ್ತಾರೆ ?

† ಶ್ರೀ ಕೆ.ಎಚ್. ಪಾಟೀಲ್.—ಈಗಾಗಲೇ ಸರ್ವೇ ರಿಪೋರ್ಟ್ ಮಾಡಿ, ಯಾರ್ಯಾರು ಸರ್ವೆ ಕೆಲಸ ಮಾಡಿಕೊಂಡಿದ್ದಾರೋ ಅವರು ಯಾವ್ಯಾವ ಉದ್ಯೋಗಗಳ ಸಲುವಾಗಿ ಅಲ್ಲಿ ಫೀಸಿಬಿಲಿಟಿ ಆಗುತ್ತದೆಂಬುದನ್ನು ಕಂಡುಹಿಡಿದುದ್ದಾರೆ. ಅವರ ಒಂದು ವರದಿ ಪ್ರಕಾರ ಉತ್ತರದಲ್ಲಿ ಹೇಳಿರುವ ಕಾರ್ಖಾನೆಗಳ ಜೊತೆಗೆ ವುಡನ್ ಡೋರ್ಸ್, ಪ್ಯಾಕಿಂಗ್ ಕೇಸಸ್, ಎಲೆಕ್ಟ್ರಿಕಲ್ ಕೇಸಸ್, ಫೋಟೋ ಫ್ರೇಂ, ಡ್ರಾಯಿಂಗ್ ಕಾರ್ಡ್ಸ್, ಟೀ ಸ್ಕ್ವೇರ್—ಇತ್ಯಾದಿ ಕೈಗಾರಿಕೆಗಳನ್ನು ಅಲ್ಲಿ ಪ್ರಾರಂಭಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಕಂಡುಬಂದಿದೆ. ಅವನ್ನು ಅಲ್ಲಿ ಪುರು ಮಾಡುವುದಾದರೆ ಅವರಿಗೆ ಬೇಕಾದಂಥ ರಾ-ಮೆಟೀರಿಯಲ್ಸ್ ಬಗ್ಗೆ ವಿಚಾರಮಾಡಿ ಕೊಡಲಾಗುತ್ತದೆ. ಅವರಿಗೆ ಬೇಕಾದಂಥ ಸಾಲವನ್ನು ಕೊಡುವುದಕ್ಕೂ ಪ್ರಯತ್ನ ಮಾಡುತ್ತೇವೆ. ಅಲ್ಲಿ ಸದ್ಯಕ್ಕೆ ಇವೆಲ್ಲಕ್ಕಿಂತ ಹೆಚ್ಚಿಗೆ ಪ್ರೋತ್ಸಾಹ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ತೀರ್ಥಹಳ್ಳಿಯಲ್ಲಿ ಏನೊಂದು ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ಇರತಕ್ಕಂಥ ಅಕ್ಕಪಕ್ಕದ ತಾಲ್ಲೂಕುಗಳಿಗೂ ಈಗ ತಾವು ಹೇಳಿದ ರಿಯಾಯಿತಿಗಳು ಲಭಿಸುತ್ತವೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಇದು ಇಡೀ ರಾಜ್ಯಕ್ಕೆ ಅನ್ವಯಿಸತಕ್ಕ ಆಜ್ಞೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಬ್ಯಾಂಟು ಪಲ್ಪ್ ಇಂಡಸ್ಟ್ರಿಯನ್ನು ಪ್ರಾರಂಭಮಾಡಲು ತಾತಾ ಕಂಪೆನಿಯವರು ಅಪ್ಲಿಕೇಷನ್ ಹಾಕಿಕೊಂಡಿದ್ದಾರೆಂದೂ ಅದು ಸರ್ಕಾರದವರ ಪರಿಶೀಲನೆಯಲ್ಲಿದೆಯೆಂದೂ ವರ್ತಮಾನ ಇದೆ ಇದರ ನಿಜಾಂಶವೇನು ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದವರಲ್ಲಿ ಇದರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಮಾನ್ಯ ಸದಸ್ಯರೇನಾದರೂ ಮಾಹಿತಿ ಕೊಟ್ಟರೆ ಪರಿಶೀಲನೆ ಮಾಡಂತ್ತಾರೆಂದು ತಿಳಿಸಲಿಕ್ಕೆ ಇಚ್ಚಿಪಡುತ್ತೇನೆ ; ಇದರ ಬಗ್ಗೆ ಸೂಕ್ತ ಕ್ರಮ ಕೂಡ ಕೈಗೊಳ್ಳಲಾಗುತ್ತದೆ.

ಶ್ರೀ ಅಬ್ದುಲ್ ಖಿದ್ದೂಸ್ ಅನ್ವರ್.—ತಾವು ಇಲ್ಲಿ ಬೊಂಬನ್ನು ಉಪಯೋಗಿಸುವುದಕ್ಕೆ ಆಜ್ಞೆ ಮಾಡಿದೆ ಎಂದು ಹೇಳಿದರೂ ಅಲ್ಲಿ ಸ್ಥಳೀಯ ಅಧಿಕಾರಿಗಳು ಬೊಂಬನ್ನು ಕಡಿಯಲಿಕ್ಕೆ ಅವಕಾಶ ಕೊಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದವರು ಯಾವಾಗಲೂ ಕೊಡುವುದಿಲ್ಲವೆಂದು ಹೇಳುತ್ತಿಲ್ಲ. ಆದರೆ ಅಲ್ಲಿ ಜನರು ತಾವೇ ಬಿದಿಕನ್ನು ಕಡಿಯುವುದಕ್ಕೆ ಪರವಾನಿಗೆ ಕೇಳಿದ್ದರಿಂದ ಅಲ್ಲಿ ಬಿದಿರು ಈಗ ತಾನೆ ಚಿಗರೊಡೆಯುತ್ತಿರುವುದರಿಂದ ಅವರಿಗೆ ಪರವಾನಿಗೆ ಕೊಟ್ಟಿಲ್ಲ. ಅದಕ್ಕೆ ಸರ್ಕಾರದವರೇ ತಂದು ಜನಕ್ಕೆ ಒದಗಿಸುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಮರಗಳನ್ನು ಯಾವ ರೂಪದಲ್ಲಿ ಯಾವ ಕೈಗಾರಿಕೆಗಳಿಗೆ ಸರ್ಕಾರದವರು ಹೇಗೆ ಒದಗಿಸುತ್ತಾರೆ ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಉತ್ತರ ಕೊಡಬೇಕಾದರೆ ಒಟ್ಟು ೩ ಸಾವಿರ ಮರಗಳಿವೆ. ಯಾವ ಮರ, ಯಾವ ಕೈಗಾರಿಕೆಗೆ ಬರುತ್ತದೆಂಬುದನ್ನು ತಿಳಿಸುವುದಕ್ಕೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಇಂಥ ನಿರ್ದಿಷ್ಟ ಕೈಗಾರಿಕೆಗೆ ಯಾವ ಮರ ಒದಗಿಸುತ್ತೀರಾ ಎಂದರೆ ಅದಕ್ಕೆ ಉತ್ತರ ಹೇಳಬಹುದು.

MAHAJAN COMMISSION'S REPORT

604. SRI D. B. KALMANKAR (Afzalpur).—Will the Chief Minister be pleased to state:—

(*a*) whether Government has received any communication from the Government of India regarding implementation of the Mahajan Commission's Report ;

(*b*) whether status-quo is proposed to be maintained in the respective States ?

SRI K. H. PATIL (Minister for Agricultnre and Forests) (On behalf of Sri D. Devaraj Urs (Chief Minister).—

(*a*) No.

(*b*) This Government has not made any proposal.

SRI D. B. KALMANKAR.—May I know whether the Central Government has made any proposal to this Government for maintaining the status quo, Sir ?

† SRI K. H. PATIL.—I have already stated that there is no proposal received from the Centre.